# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ - 740 (840)
ಸದಸ್ಯರ ಹೆಸರು - ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ - 19.08.2025
ಉತ್ತರಿಸಬೇಕಾಗಿರುವ ಸಚಿವರು - ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಲೋಕಾಯುಕ್ತ ಸಂಸ್ಥೆ ತನಿಖಾ ಅಂದಾಜಿನಂತೆ 2006 ರಿಂದ 2010 ರ ಅವಧಿಯಲ್ಲಿ 2.98 ಟನ್ ಅದಿರು ಅಕ್ರಮ-ರಫ್ತು ಆಗಿರುವುದರಿಂದ ರಾಜ್ಯದ ಖಜಾನೆಗೆ 12.228 ಕೋಟಿ ರೂ ಗಳು ನಷ್ಟವಾಗಿರುವುದು ನಿಜವೇ ಹಾಗೂ ಇದಕ್ಕಿಂತ ಹೆಚ್ಚಾಗಿ ರಾಜ್ಯ ಬೊಕ್ಕಸಕ್ಕೆ ನಷ್ಟ ಉಂಟಾಗಿದ್ದರೆ ಪೂರ್ಣ ಮಾಹಿತಿ ನೀಡುವುದು. | ಮಾನ್ಯ ಲೋಕಾಯುಕ್ತ ವರದಿಯ ಅಧ್ಯಾಯ 1 ರಿಂದ 3 ರಲ್ಲಿ ಉಲ್ಲೇಖಿಸಿದಂತೆ, ರಾಜ್ಯದಿಂದ ಒಟ್ಟು 2.98 ಕೋಟಿ ಟನ್ ಕಬ್ಬಿಣದ ಅದಿರು ಅನಧಿಕೃತವಾಗಿ ಸಾಗಾಣಿಕೆಯಾಗಿದ್ದು, ಇದರಿಂದ ರೂ 12.228 ಕೋಟಿ ನಷ್ಟ ಉಂಟಾಗಿದೆಯೆಂದು ಪ್ರಸ್ತಾಪಿಸಿ ಹೆಚ್ಚುವರಿ ತನಿಖೆ ಕೈಗೊಳ್ಳಲು ಶಿಫಾರಸ್ಸು ಮಾಡಲಾಗಿರುತ್ತದೆ.<br><br>ಮಾನ್ಯ ಲೋಕಾಯುಕ್ತ ವರದಿಯನ್ನಾದರಿಸಿ, ಸಿ ಬಿ ಐ ಮತ್ತು ಎಸ್‌ಐಟಿಗೆ ತನಿಖೆಗಾಗಿ ಪ್ರಕರಣಗಳನ್ನು ವಹಿಸಲಾಗಿದ್ದು, ಸದರಿ ತನಿಖಾ ಸಂಸ್ಥೆಗಳ ತನಿಖೆ ಅಂತಿಮವಾದ ನಂತರ ರಾಜ್ಯ ಬೊಕ್ಕಸಕ್ಕೆ ಉಂಟಾದ ನಷ್ಟದ ಮಾಹಿತಿ ಲಭ್ಯವಾಗುತ್ತದೆ. |
| ಆ) | ಅಕ್ರಮ ಮಾಡಿರುವ ವ್ಯಕ್ತಿ/ಸಂಸ್ಥೆಗಳು ಯಾವುವು ಹಾಗೂ ಇವರ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮವೇನು: | ಮಾನ್ಯ ಲೋಕಾಯುಕ್ತರು ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ತನಿಖೆ ನಡೆಸಿ 2008 ರಲ್ಲಿ ಭಾಗ-1 ಮತ್ತು 2011 ರಲ್ಲಿ ಭಾಗ-2 ರ ಸಮಗ್ರ ವರದಿಯನ್ನು ಸರ್ಕಾರಕ್ಕೆ ನೀಡಿರುತ್ತಾರೆ.<br>ಸದರಿ ವರದಿಯನ್ನು ಆಧರಿಸಿ ಈ ಕೆಳಕಂಡಂತೆ ಕ್ರಮವಹಿಸಲಾಗಿರುತ್ತದೆ:<br>1. ಸರ್ಕಾರವು ಅಧ್ಯಾಯ 1,2,3 ಮತ್ತಿತರೆ ಸಂಬಂಧಪಟ್ಟ ಅಧ್ಯಾಯಗಳನ್ನು ಒಳಗೊಂಡಂತೆ ಕಬ್ಬಿಣದ ಅದಿರನ್ನು ಬಂದರುಗಳ ಮೂಲಕ ರಫ್ತು, ಮಾಡಿದ ಪ್ರಕರಣಗಳನ್ನು ಒಳಾಡಳಿತ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ HD 98 CID 2013 Dated 18.11.2013 ರಲ್ಲಿ ಸಿಬಿಐ ಸಂಸ್ಥೆಗೆ ವಹಿಸಲಾಗಿದೆ.<br>2. ಸರ್ಕಾರವು ಆದೇಶ ಸಂಖ್ಯೆ: ಸಿಐ 282 ಎಂಎಂಎಂ 2011 (ಪಿ) ಬೆಂಗಳೂರು ದಿನಾಂಕ: 22.11.2013 ರಂದು ಸದರಿ ಆದೇಶಕ್ಕೆ ಲಗತ್ತಿಸಿದ ಪ್ರಕರಣಗಳಲ್ಲಿ ಹೆಚ್ಚುವರಿ ತನಿಖೆ ಕೈಗೊಳ್ಳಲು ವಿಶೇಷ ತನಿಖಾ ತಂಡಕ್ಕೆ ವಹಿಸಿರುತ್ತದೆ. |

| | | |
|---|---|---|
| | | 3. ಸರ್ಕಾರವು ಆದೇಶ ಸಂಖ್ಯೆ: ಸಿಐ 282 ಎಂಎಂಎಂ 2011 (ಪಿ) ಬೆಂಗಳೂರು ದಿನಾಂಕ: 06.06.2017 ರಂದು ಮಾನ್ಯ ಲೋಕಾಯುಕ್ತರು ಸಲ್ಲಿಸಿದ ವರದಿ ಭಾಗ-1 ಮತ್ತು ಭಾಗ-2 ರಲ್ಲಿ ಪ್ರಸ್ತಾಪಿಸಿದ ಎಲ್ಲಾ ಪ್ರಕರಣಗಳನ್ನು (ಸಿ.ಬಿ.ಐ ಮತ್ತು ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿರುವ ಪ್ರಕರಣಗಳನ್ನು ಹೊರತುಪಡಿಸಿ) ತನಿಖೆಗಾಗಿ ವಿಶೇಷ ತನಿಖಾ ತಂಡಕ್ಕೆ ವಹಿಸಿರುತ್ತದೆ.<br>4) ಸಿ.ಬಿ.ಐ ಸಂಸ್ಥೆಯು ಪ್ರಾಥಮಿಕ ತನಿಖೆ ನಡೆಸಿ ಮುಕ್ತಾಯಗೊಳಿಸಿರುವ ಮತ್ತು ಪ್ರಾಥಮಿಕ ತನಿಖೆ ರಿಜಿಸ್ಟರ್ ಕೇಸ್(RCs)ಗಳನ್ನಾಗಿ ಪರಿವರ್ತಿಸಲು ವಿಫಲವಾಗಿ ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಿದ ಪ್ರಕರಣಗಳನ್ನು ಸರ್ಕಾರದ ಆದೇಶ ಸಂಖ್ಯೆ: ಸಿಐ 282 ಎಂಎಂಎಂ 2013 (ಭಾ-2) ದಿನಾಂಕ;21.03.2018 ರಂದು ವಿಶೇಷ ತನಿಖಾ ತಂಡಕ್ಕೆ ವಹಿಸಲಾಗಿದೆ.<br>5) ತದನಂತರ, ಸರ್ಕಾರವು ಆದೇಶ ಸಂಖ್ಯೆ:CI 18 MMM 2019 ಬೆಂಗಳೂರು ದಿನಾಂಕ:22.11.2024 ರಲ್ಲಿ 10 ಸಿ ವರ್ಗದ ಗಣಿಗುತ್ತಿಗೆಗಳನ್ನು ವಿಶೇಷ ತನಿಖಾ ತಂಡಕ್ಕೆ ವಹಿಸಿರುತ್ತದೆ. ಪ್ರಸ್ತುತ ತನಿಖೆ ಪ್ರಗತಿಯಲ್ಲಿರುತ್ತದೆ. |
| ಇ) | ಅಕ್ರಮ ಗಣಿಗಾರಿಕೆ ಶೇಕಡ 92.4 ರಷ್ಟು ಪ್ರಕರಣಗಳು ತನಿಖೆಗೆ ಒಳಪಡದಿರುವುದರಿಂದ ವಶಪಡಿಸಿಕೊಂಡ ಬಹುಲಕ್ಷ ಕೋಟಿ ರೂ ಸಂಪತ್ತು ಖಜಾನೆಗೆ ವಾಪಸ್ಸು ಆಗಿಲ್ಲದಿರುವುದು ನಿಜವೇ | ಮಾನ್ಯ ಲೋಕಾಯುಕ್ತ ವರದಿಯನ್ನಾದರಿಸಿ, ಸಿ ಬಿ ಐ ಮತ್ತು ವಿಶೇಷ ತನಿಖಾ ತಂಡಕ್ಕೆ ತನಿಖೆಗಾಗಿ ಪ್ರಕರಣಗಳನ್ನು ವಹಿಸಲಾಗಿದ್ದು, ಸದರಿ ತನಿಖಾ ಸಂಸ್ಥೆಗಳಲ್ಲಿ ತನಿಖೆಯ ಅಂತಿಮ ವರದಿಯ ನಂತರ ನಷ್ಟದ ಮೊತ್ತ ಹಾಗೂ ಇದಕ್ಕೆ ಕಾರಣಕರ್ತರ ಮಾಹಿತಿ ಲಭ್ಯವಾಗುತ್ತದೆ. |
| ಈ | ಹಾಗಿದಲ್ಲಿ ,ಇದಕ್ಕೆ ಕಾರಣ ಕರ್ತರು ಯಾರು ಇಷ್ಟು ದೊಡ್ಡ ಮೊತ್ತದ ಹಣವನ್ನು ಸರ್ಕಾರ ಯಾವಾಗ ಮರಳಿ ಪಡೆಯುತ್ತದೆ ಹಾಗೂ ಎಷ್ಟು ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿದೆ (ಪೂರ್ಣ ವಿವರ ನೀಡುವುದು) | |

ಸಿಐ 15 ಎಂಐಸಿ 2025

**(ಎಸ್.ಎಸ್.ಮಲ್ಲಿಕಾರ್ಜುನ್)**
ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಮತ್ತು
ತೋಟಗಾರಿಕಾ ಸಚಿವರು